ಸಾಕ್ಷಿಗೆ ದಿನಾಂಕಃ **29.08.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಮಾನ್ಯ ಎ ಜಿ ಪಿ ಯವರಿಂದ ಃಃ

ದಾವಾ ಆಸ್ತಿ ಮೀಸಲು ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-17 ನ್ನು ಸಾಗುವಳಿ ಚೀಟಿ ನೀಡುವಾಗ ನಿಮ್ಮ ಇಲಾಖೆಯವರು ಅರಣ್ಯ ಇಲಾಖೆಯವರ ಅಭಿಪ್ರಾಯ ಪಡೆದುಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಎ ಸಿ ಮತ್ತು ಡಿ ಸಿ ರವರು ಸ್ಥಳ ಪರಿಶೀಲನೆ ನಡೆಸಿ ನೋಡಲಾಗಿ ಸದರಿ ಸ್ಥಳಕ್ಕೆ ಸಂಬಂಧಿಸಿ ಮರಮಾಲೀಕೆ ಈಗಾಗಲೇ ಚಲನ್ ಮೂಲಕ ಕಟ್ಟಿದ್ದರಿಂದ ಅದು ಕಂದಾಯ ಇಲಾಖೆಗೆ ಸಂಬಂಧಪಟ್ಟ ಜಾಗ ಆಗಿರುತ್ತದೆ ಎಂದು ತೀರ್ಮಾನ ಪಟ್ಟಿದ್ದು ಆದ ಕಾರಣ ನಾವು ಅರಣ್ಯ ಇಲಾಖೆಯವರ ಅಭಿಪ್ರಾಯ ಪಡೆದುಕೊಂಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

ದಾವಾ ಆಸ್ತಿಗೆ ಸಂಬಂಧಿಸಿ ನಾವು ದಿನಾಂಕಃ 26.04.1996 ರಲ್ಲಿ ಅರಣ್ಯ ಇಲಾಖೆಗೆ ಅಭಿಪ್ರಾಯ ಕೇಳಿದ್ದು, ಅದರಂತೆ ಈಗ ನನಗೆ ತೋರಿಸಿರುವ ದಾಖಲೆಯಂತೆ ಅರಣ್ಯ ಇಲಾಖೆಯವರು ದಾವಾ ಆಸ್ತಿ ಮೀಸಲು ಅರಣ್ಯ ಪ್ರದೇಶ ಎಂದು ಅಭಿಪ್ರಾಯ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆ ಒಪ್ಪಿದ್ದರಿಂದ ಅದನ್ನು ನಿಡಿ-15 ಎಂದು ಗುರುತಿಸಲಾಯಿತು. ಸದರಿ ಮರಮಾಲೀಕೆ ಮೊತ್ತವನ್ನು ನಾವು ಮಂಜೂರಾತಿಯಾಗುವ ಮೊದಲೇ 1978 ರ ಪೂರ್ವದಲ್ಲೆ ನಿಷ್ಕರ್ಶೆ ಮಾಡಿದ್ದು, ಸದರಿ ಮರಮಾಲೀಕೆ ಹಣವನ್ನು ನಾವು ದಿನಾಂಕಃ 20.09.1995 ರಲ್ಲಿ ಕಟ್ಟಿಸಿಕೊಂಡಿರುತ್ತೇವೆ.

ಖಾಯಂ ಮಂಜೂರಾತಿ ಆದೇಶ ಜಿಲ್ಲಾಧಿಕಾರಿಗಳ ಆದೇಶ ಸಂಃ ಎಲ್ ಸಿ ಆರ್ ಸಿ ಆರ್ 3/1999-2000 ದಿನಾಂಕಃ 03.03.2000 ರಲ್ಲಿ ಆಗಿರುತ್ತದೆ.

ಸದರಿ ಮಂಜೂರಾತಿ ಆದೇಶದಲ್ಲಿ ಹೇಳಲಾದ ವಾದಿಗೆ ಮಂಜೂರಾತಿ ಮಾಡಿರುವ 5 ಎಕರೆ ಜಮೀನಿನ ಚೆಕ್ಕುಬಂಧಿಯನ್ನು ಪ್ರತ್ಯೇಕವಾಗಿ ತಿಳಿಸಿರುವುದಿಲ್ಲ, ಸರ್ವೆ ನಕ್ಷೆ ಪ್ರಕಾರ ಎಂದು ತೋರಿಸಲಾಗಿರುತ್ತದೆ. ಸರ್ವೆ ನಕಾಶೆ ನಿಪಿ-15 ರ ಪ್ರಕಾರ ಈಗ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಪಕ್ಕಾಪೋಡಿಯಾಗಿರುವುದಿಲ್ಲ. ಆ ರೀತಿ ಪಕ್ಕಾಪೋಡಿಯಾಗದ ಕಾರಣ ವಾದಿಗೆ 5 ಎಕರೆ ಜಮೀನು ಎಲ್ಲಿ ಮಂಜೂರಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ಆಗಿನ ಕಾಲದ ತಹಶೀಲ್ದಾರ್ ಮತ್ತು ಎ ಸಿ ಮತ್ತು

ಸರ್ವೆಯವರ್ ರವರನ್ನು ಕರೆದುಕೊಂಡು ಸದರಿ ದಾವಾ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿ ದಾವಾ ಆಸ್ತಿ ಇದೆ ಎಂದು ಸ್ಪಷ್ಟಪಡಿಸಿಕೊಂಡು ನಂತರ ನಿಪಿ-17 ನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.ಹರಾವರಿ ಗ್ರಾಮದ ಸರ್ವೆ ನಂಃ 155 ರಲ್ಲಿ ಒಟ್ಟು ವಿಸ್ತೀರ್ಣ 408.20 ಆಗಿರುತ್ತದೆ. ನಿಪಿ-11 ರಲ್ಲಿ ಹರಾವರಿ ಗ್ರಾಮದ ಸರ್ವೆ ನಂಃ 155 ರಲ್ಲಿ ದಾವಾ ಆಸ್ತಿಗೆ ಹೋಗಿ ಪರಿಶೀಲನೆ ನಡೆಸಿರುವುದಾಗಿ ಮತ್ತು ದಾವಾ ಆಸ್ತಿಯ ಚೆಕ್ಕುಬಂಧಿ ಇರುವುದಿಲ್ಲ ಎಂದರೆ ಸಾಕ್ಷಿಯು ಪುನರ್ ಪರಿಶೀಲನೆ ನಡೆಸಿ ಪ್ರಸ್ತಾವನೆ ಕಳುಹಿಸಿರುತ್ತಾರೆ ಮತ್ತು ಪುನರ್ ಪರಿಶೀಲನೆ ನಡೆಸಿದಾಗ ವಾದಿ ಮಾರಾಟಗಾರರು ದಾವಾ ಆಸ್ತಿಯಲ್ಲಿ ಸುಮಾರು 25-30 ವರ್ಷಗಳಿಂದ ಕಾಫಿ, ದೊಡ್ಡ ಸಿಲ್ವರ್ ಮರಗಳನ್ನು ಬೆಳೆಸಿದ್ದು ಹೆಚ್ಚಿನ ಪ್ರಮಾಣದಲ್ಲಿ ಕಾಡುಜಾತಿ ಮರಗಳು ಇರುವುದಿಲ್ಲ ಎಂದು ವರದಿ ಮಾಡಿರುತ್ತಾರೆಂದು ನುಡಿಯುತ್ತಾರೆ.

ಮಂಜೂರಾತಿ ಆದೇಶ ಮಾಡುವಾಗ ಅರಣ್ಯ ಇಲಾಖೆಯವರು ಸದರಿ ಸರ್ವೆ ನಂಃ 155 ದಾವಾ ಆಸ್ತಿಯು ಮೇಗರಮಕ್ಕಿ ಮೀಸಲು ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ಮತ್ತು ಮಂಜೂರಾತಿ ಆದೇಶವನ್ನು ರದ್ದು ಮಾಡಬೇಕೆಂದು ತಿಳಿಸಿದರೂ ಸಹ ಸದರಿ ಪ್ರದೇಶವು ಅರಣ್ಯ ಪ್ರದೇಶಕ್ಕೆ ಬರುವುದಿಲ್ಲ ಎಂದು ಮಂಜೂರಾತಿ ಆದೇಶದಲ್ಲಿ ಉಲ್ಲೇಖ ಮಾಡಿರುತ್ತೇವೆಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ದಿನಾಂಕಃ 29.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ